ಹುತ್ತರಿ ಹಬ್ಬ ಕಳೆದು ಒಂದು ವಾರವಾಗಿತ್ತಷ್ಟೇ. ಡಿಸೆಂಬರ್ ತಿಂಗಳಿನ ಎರಡನೆಯ ವಾರ. ಕೊಡ್ಲಿಪೇಟೆಯಲ್ಲಿ ನನ್ನ ಹಿರಿಯರ ಮನೆಯಲ್ಲಿ ಹಬ್ಬವನ್ನಾಚರಿಸಿ, ಹಿಂದಿರುಗಿದ್ದೆ. ನಮ್ಮ ಮನೆಯೇ ಕಚೇರಿ ಕೂಡಾ. ಮೆಟ್ಟಿಲೇರುವಾಗ, ಅರೆತೆರೆದಿದ್ದ ಕದ, ನನ್ನ ಸೀನಿಯರ್ ಅಡ್ಡಂಡ ಕರಮಚಂದನ ಇರುವಿಕೆಯನ್ನು ಸೂಚಿಸುತ್ತಿತ್ತು. ಎಂದಿನಂತೆ ಆತ ಲ್ಯಾಪ್‌ಟ್ಯಾಪಿನಲ್ಲಿ ಚೆಸ್ ಆಟದಲ್ಲಿ ಮಗ್ನನಾಗಿದ್ದ.

"ಕಾಯಪಂಡ ಪ್ರಸಾದ್ ಬಿದ್ದಪ್ಪ! ಬಾ, ಬಾ... ಸರಿಯಾದ ಸಮಯಕ್ಕೇ ಬಂದಿದ್ದೀ!! ಇನ್‌ಸ್ಪೆಕ್ಟರ್ ಡಿಸೋಜ ಈಗ ಬರುತ್ತಿದ್ದಾನಂತೆ... ಒಳ್ಳೆಯ ಪ್ರಕರಣಗಳಿಲ್ಲದೆ ತಲೆಗೆ ಹುಳ ಹಿಡಿದಂತಾಗಿದೆ" ನಾಟಕೀಯವಾಗಿ ಸ್ವಾಗತಿಸಿದ ಕರಮಚಂದ.

ವಿರಾಜಪೇಟೆಯ ನಗರ ಠಾಣೆಯ ವೃತ್ತ ನಿರೀಕ್ಷಕ ವೆಲ್ಲೆಂಟನ್ ಡಿಸೋಜ ನಮ್ಮ ಮಾಮೂಲಿ ಸಂದರ್ಶಕರಲ್ಲೊಬ್ಬನಾಗಿದ್ದ. ತನಗೆ ಬಗೆಹರಿಸಲಾಗದ ಕ್ಲಿಷ್ಟ ಪ್ರಕರಣಗಳಿದ್ದರೆ, ಕರಮಚಂದನ ಸಲಹೆಗಾಗಿ ಆತ ಭೇಟಿ ನೀಡುತ್ತಿದ್ದ.

"ಏನು ಪ್ರಕರಣವಂತೆ?"

ನನ್ನ ಪ್ರಶ್ನೆಗೆ ಕರಮಚಂದ ಉತ್ತರಿಸಬೇಕೆನ್ನುವಷ್ಟರಲ್ಲಿ, ಮೆಟ್ಟಿಲಲ್ಲಿ ಹೆಜ್ಜೆ ಸಪ್ಪಳ ತೂರಿಬಂತು. ಮತ್ತೆರಡು ಕ್ಷಣಗಳಲ್ಲಿ, ಡಿಸೋಜ ನಮ್ಮ ಕಚೇರಿ ಪ್ರವೇಶಿಸಿದ.

"ಡಿಸೋಜ, ರಚನ್ ಚರ್ಮಣನ ನಾಪತ್ತೆ ಪ್ರಕರಣ ಎಲ್ಲೀವರೆಗೂ ಬಂತು?" ಗಣಕಯಂತ್ರದಿಂದ ತಲೆಯೆತ್ತದೆ ಪ್ರಶ್ನೆ ತೂರಿದ ಸೀನಿಯರ್.

"ಕರಮಚಂದ್, ಹೇಗ್ ಗೊತ್ತಾಯ್ತು ನಾನು ಅದನ್ನೇ ಕೇಳೋದಿಕ್ಕೇ ಬಂದಿದ್ದು ಅಂತ?" ಡಿಸೋಜನ ಮೊಗದಲ್ಲಿ ಅಚ್ಚರಿ.

"ಅದೇನು ದೊಡ್ಡ ಸಂಶೋಧನೆಯೆ? ವಿರಾಜಪೇಟೆಯಲ್ಲಿ ಕಳೆದ ಹದಿನೈದು ದಿನಗಳಲ್ಲಿ ನಡೆದಿದ್ದು ಎರಡೇ ಕುತೂಹಲ ಹುಟ್ಟಿಸುವ ಪ್ರಕರಣಗಳು. ಮೊದಲನೇದ್ದು, ಸಿಲ್ವರ್ ಸ್ಪೂನ್ ಎಸ್ಟೇಟಿನಲ್ಲಿ ನಡೆದ ಮೆನೇಜರನ ಕೊಲೆ ಪ್ರಕರಣ. ಅದರಲ್ಲಿ ಸಂಶಯಿತ ಈಗಾಗ್ಲೇ ನಾಪತ್ತೆಯಾಗಿದ್ದಾನೆ. ಕೊಲೆ ಮಾಡಿದ್ದು ಅವನೇ ಎಂಬುದಕ್ಕೆ ಬೇರೆ ಸಾಕ್ಷ್ಯ ಬೇಕೆ? ಇನ್ನೊಂದು, ನಿನ್ನೆ ಪತ್ರಿಕೆಗಳಲ್ಲಿ ಪ್ರಕಟವಾದ ಚುಟುಕು ಸುದ್ದಿ... ಬಿಟ್ಟಂಗಳ ನಿವಾಸಿ ರಚನ್ ಚರ್ಮಣ ಎನ್ನುವಾತ ನಾಲ್ಕು ದಿನಗಳಿಂದ ನಾಪತ್ತೆಯಾಗಿದ್ದಾನೆ! ಅದೇ ನಿಮ್ ತಲೆ ಕೊರೀತಾ ಇರೋದು, ಅಲ್ವೆ...?"

"ಎರಡು ದಿನ ಆಯ್ತು. ಏನೂ ಸುಳಿವು ಸಿಕ್ತಾ ಇಲ್ಲ" ಡಿಸೋಜ ಗಲ್ಲ ಉಜ್ಜಿಕೊಂಡ.

"ಕಾವೇರಿ ಕಾಲೇಜಿನಲ್ಲಿ ಇತಿಹಾಸದ ಪ್ರೊಫೆಸರ್ ಆಗಿರೋ ಸುಮಾರು ಐವತ್ತೆಂಟು ವಯಸ್ಸಿನ ರಚನ್ ಚರ್ಮಣ ಯಾಕೆ ನಾಪತ್ತೆಯಾದ? ನೀವು ಅವ್ನ ಇತಿಹಾಸ ನೋಡಿದ್ರಾ?"

"ನಿಮ್ಗೆ ಈ ವಿಚಾರ ಹೇಗೆ ತಿಳೀತು? ಪತ್ರಿಕೇಲಿ ಆತನ ವಿವರಗಳೇನೂ ಪ್ರಕಟವಾಗಿರ್ಲಿಲ್ಲ."

"ಓಹ್! ಡಿಸೋಜ, ನಿಮ್ಗೆ ನನ್ನ ಹವ್ಯಾಸ ಗೊತ್ತಿಲ್ವೆ? ವ್ಯಕ್ತಿಗಳ ಮಾಹಿತಿ ಶೇಖರಿಸಿಡೋದು! ವಿರಾಜಪೇಟೆಯ ಬಹಳ ಮಂದಿಯ ವಿವರಗಳು ನನ್ನ ಗಣಕಯಂತ್ರದಲ್ಲಿ ಬೆಚ್ಚಗೆ ಕುಳಿತಿವೆ!! ನನ್ಗೆ ಪೊಲೀಸ್ ಸುಪರಿಂಟೆಂಡೆಂಟ್‌ರಿಂದ ಮಾನ್ಯತೆ ಸಿಕ್ಕಿದ್ದರಿಂದ ಡಾಟ ಸಂಗ್ರಹ ಸುಲಭವಾಯ್ತು. ಎಲ್ಲಾ ಸರಕಾರಿ ಕಚೇರಿಗಳು, ವಿದ್ಯಾ ಸಂಸ್ಥೆಗಳು ಮತ್ತು ಹಲವು ಪ್ರಮುಖ ಖಾಸಗಿ ಉದ್ಯಮಿಗಳು ಕೂಡ ತಮ್ಮ ಉದ್ಯೋಗಿಗಳ, ವ್ಯವಹಾರಕ್ಕೆ ಸಂಬಂಧಿಸಿದ ವ್ಯಕ್ತಿಗಳ ವಿವರಗಳನ್ನು ನೀಡಿ, ನನ್ಗೆ ಸಹಕಾರ ನೀಡಿದ್ದಾರೆ. ಅವರಿಗೆ ಗೊತ್ತು ಮುಂದೊಂದು ದಿನ ಅದರ